ಚೆನ್ನಾಗಿ ಇಟ್ಟಿರಲಿ' ಎಂದು ಏದುಸಿರುಬಿಡುತ್ತಿದ್ದ ನಮ್ಮನ್ನು ಕರುಣೆಯಿಂದ ಹರಸಿದ.

ಬೆಟ್ಟ–ಕಣಿವೆಗಳ ದಾರಿಯಲ್ಲಿ ನಮ್ಮನ್ನು ಹರಸಿದ ಆಗಂತುಕನ ಹೆಸರು ಮುನ್ನಾ. ಜೊತೆಯಲ್ಲಿ ಇಳಿಯುತ್ತಿದ್ದ ಆತನ ಮಗಳು ಅಲ್ಲಿಂದ ಮುಂದಕ್ಕೆ ಹೆಜ್ಜೆ ಇಡಲಾರದೆ ಕಾಲು ನೋವೆಂದು ಅಳುತ್ತಾ ಅಲ್ಲೇ ನಿಂತೇಬಿಟ್ಟಳು! ಮುಂದಕ್ಕೆ ಹೆಜ್ಜೆ ಇಡಲು ಮಗಳನ್ನು ಪುಸಲಾಯಿಸುತ್ತಾ ನಿಂತ ತಾಯಿಯನ್ನು ನಮ್ಮ ತಂಡ ಮಾತನಾಡಿಸಿತು. 'ನಮ್ಮ ಮಗಳು ಏಳನೇ ತರಗತಿ ಓದುತ್ತಿದ್ದಾಳೆ. ಈ ಹಾದಿ ಇಷ್ಟೊಂದು ಕಷ್ಟ ಇದ್ದಿರಲಾರದು ಎಂದುಕೊಂಡು ನಮ್ಮೊಂದಿಗೆ ಅವಳನ್ನು ಕರೆದುಕೊಂಡು ಬಂದೆವು. ಆದರೆ ಅವಳಿಗೆ ನಡೆಯಲು ಕಷ್ಟವಾಗುತ್ತಿದೆ' ಎಂದರು. 'ನೀವು ಈಗಾಗಲೇ ಗುರಿ ಮುಟ್ಟಿ ಹಿಂದಿರುಗುತ್ತಿದ್ದೀರಿ. ಇನ್ನು ಒಂದು ಗಂಟೆಯಲ್ಲಿ ಭಟ್ಟರ ಮನೆ ತಲುಪಲಿದ್ದೀರಿ, ನಿಧಾನಕ್ಕೆ ಹೋಗಿರಿ' ಎಂದೆ. ಆ ಪುಟ್ಟ ಕುಟುಂಬಕ್ಕೆ ನಮ್ಮಲ್ಲಿದ್ದ ಹಣ್ಣಿನ ರಸವನ್ನು ಕೊಟ್ಟೆವು. ತುಳುವೋ ಅಥವಾ ಕೊಂಕಣಿ ಭಾಷೆಯಲ್ಲೋ ಮಾತನಾಡುತ್ತಾ ತಾಯಿ–ಮಗಳು ಪರಸ್ಪರ ಕೈ ಹಿಡಿದು ಮುಂದಕ್ಕೆ ನಡೆದರು.

ಇನ್ನೊಂದು ನವಜೋಡಿ ತುಸು ಬಿರುಸಿನಿಂದಲೇ ಹೆಜ್ಜೆ ಇಡುತ್ತಾ ನಮ್ಮನ್ನು ದಾಟಿಕೊಂಡು ಹೋಗುತ್ತಿತ್ತು. ನಮ್ಮನ್ನು ನೋಡಿ ಕುಡಿಯಲು ನೀರು ಕೇಳಿದರು. ನಾನು ನನ್ನ ಬ್ಯಾಗಿನಲ್ಲಿದ್ದ ನೀರನ್ನು ತೆಗೆದುಕೊಳ್ಳುವಂತೆ ಅವರಿಗೆ ಹೇಳಿದೆ. 'ಇದು ಆ ಝರಿಯಿಂದ ತುಂಬಿ ತಂದಿದ್ದಾ ಅಥವಾ ಕೆಳಗಿನಿಂದ ತಂದಿದ್ದಾ!' ಎಂದು ಯುವಕ ಕೇಳಿದ. 'ಆ ಝರಿಯಿಂದಲೇ ತುಂಬಿ ತಂದಿದ್ದು' ಎಂದೆ. 'ಹಾಗಾದರೆ ಬೇಡ ಬಿಡಿ. ಅದರಲ್ಲಿ ಬ್ಯಾಕ್ಟೀರಿಯಾ ಇರುತ್ತೆ' ಎಂದು ಮುಖ ತಿರುವಿಕೊಂಡು ಮುಂದಕ್ಕೆ ನಡೆದ. ಆ ಯುವತಿ ಅವನಿಗೆ ಹಿಂದಿಯಲ್ಲಿ ಏನನ್ನೋ ಹೇಳುತ್ತಾ ನನ್ನ ಕಡೆ ತಿರುಗಿ 'ಕೊಡಿ, ನಾನು ಕುಡಿಯುತ್ತೇನೆ' ಎಂದು ಬಾಟಲಿ ತಗೆದುಕೊಂಡಳು. ಕೆಲ ನಿಮಿಷಗಳ ಮಾತುಕತೆಯಿಂದ ಆ ಹದಿಹರೆಯದ ಜೋಡಿ ಕೇರಳದ ಅಂಚಿನಿಂದ ಬಂದಿರುವುದಾಗಿ ತಿಳಿಯಿತು.

ನಾವು ಕುಕ್ಕೆ ಸುಬ್ರಮಣ್ಯದಿಂದ ಬೆಳಗ್ಗೆ ಐದು ಗಂಟೆಗೆ ಚಾರಣ ಹೊರಟು ಆರು ಕಿ.ಮೀ ಏರು ಇಳುವಿನ ಅರಣ್ಯದಿಂದ ಕೂಡಿದ ದಾರಿಯಲ್ಲಿ ಸಾಗಿ, ಭಟ್ಟರ ಮನೆಗೆ ಒಂಬತ್ತು ಗಂಟೆಗೆ ತಲುಪಿದೆವು. ಅಲ್ಲಿಂದ ಬೆಳಗ್ಗೆ ಹತ್ತು ಗಂಟೆಗೆ ಹೊರಟು, ಆ ಅಗಾಧ ಪರ್ವತದ ಮೇಲಿನ ಸಣ್ಣ–ಎತ್ತರದ ಗುಡ್ಡಗಳನ್ನು ದಾಟುತ್ತಾ ಕಲ್ಲು ಮತ್ತು ಜಾರು ಮಣ್ಣಿನಿಂದ ಕೂಡಿದ ಕಾಲು ದಾರಿಯಲ್ಲಿ ಏದುಸಿರು ಬಿಡುತ್ತಾ ನಡೆಯುತ್ತಿದ್ದೆವು. ಆ ಪರ್ವತದ ಹೆಸರು 'ಕುಮಾರ ಪರ್ವತ'.

ಬೆಟ್ಟವನ್ನು ಹತ್ತಿ ನೋಡಬೇಕೆಂಬ ನಮ್ಮ ಬಹುದಿನಗಳ ಹಂಬಲ ಕೈಗೂಡಿತ್ತು. ಹೀಗೆ ಕುಮಾರ ಪರ್ವತ ಏರುವಾಗ ದೊರೆತ ಅನುಭವದ ಸಣ್ಣ ಸಣ್ಣ ಭಾಗಗಳು ಇವು. ಇಳಿಯುವಾಗಿನ ಅನುಭವವೇ ಬೇರೆ.

ನಮ್ಮ ಮುಂದೆ ತಮಿಳುನಾಡಿನ ಹೊಸೂರಿನಿಂದ ಬಂದಿದ್ದ ಯುವ ಜೋಡಿಯೊಂದು ನಡೆಯುತ್ತಿತ್ತು. ಯುವತಿ ಹವಾಯಿ ಚಪ್ಪಲಿ ಧರಿಸಿ ಕುಂಟುತ್ತಾ ನಡೆಯುತ್ತಿದ್ದಳು. ಅವಳನ್ನು ಕಂಡು ನನ್ನ ಜೊತೆಯಲ್ಲಿದ್ದ ಗೋವಿಂದರಾಜುರವರು, 'ಅಯ್ಯೋ ಮೇಡಂ, ಶೂ ಧರಿಸಿಕೊಂಡು ನಡೆಯುವುದೇ ಕಷ್ಟ! ಅಂತಹುದರಲ್ಲಿ ನೀವು ಹವಾಯಿ ಚಪ್ಪಲಿ ಮೆಟ್ಟಿಕೊಂಡು ನಡೆಯಲು

## ಕುಮಾರ ಪರ್ವತಕ್ಕೆ ಹೋಗುವುದು ಹೇಗೆ?

ಮಾರ್ಗ 1: ಕುಕ್ಕೆ ಸುಬ್ರಮಣ್ಯದ ದೇವಸ್ಥಾನ ಹಿಂಬದಿಯ 'ದೇವರ ಗದ್ದೆ'ಯಿಂದ ಮಧ್ಯಾಹ್ನ ಹೊರಟು ಕತ್ತಲಾಗುವುದರೊಳಗೇ 'ಗಿರಿಗದ್ದೆ' (ಭಟ್ಟರ ಮನೆ) ತಲುಪಿ, ಅಲ್ಲಿನ ಟೆಂಟ್‌ನಲ್ಲಿ ರಾತ್ರಿ ಕಳೆದು, ಮುಂಜಾನೆ ಐದು ಗಂಟೆಗೆ ಚಾರಣ ಪ್ರಾರಂಭಿಸಬೇಕು. ಅಲ್ಲಿಂದ ಸುಮಾರು ಏಳು ಕಿ.ಮೀ. ದೂರವಿರುವ ಕುಮಾರ ಪರ್ವತ ತಲುಪಬೇಕು. ಅದೇ ದಿನ ಸಂಜೆ ಕತ್ತಲಾಗುವಷ್ಟರಲ್ಲಿ ಕುಕ್ಕೆ ಸುಬ್ರಮಣ್ಯ ಸೇರಿಕೊಳ್ಳಬಹುದು. ಕೆಲವು ಸಾಹಸೀ ಚಾರಣಿಗರು ಕುಕ್ಕೆ ಸುಬ್ರಮಣ್ಯದಿಂದ ಬೆಳಗ್ಗೆ ಐದೂವರೆಗೆ ಹೊರಟು, ಭಟ್ಟರ ಗಿರಿಗದ್ದೆ ಮನೆಯಲ್ಲಿ ತಿಂಡಿ ತಿಂದು, ಅಲ್ಲಿಂದ ಮುಂದೆ ಕುಮಾರ ಪರ್ವತ ತಲುಪಿ, ಕತ್ತಲಾಗುವಷ್ಟರಲ್ಲಿ ಭಟ್ಟರ ಮನೆಗೆ ಹಿಂದಿರುಗುತ್ತಾರೆ. ಆದರೆ ಇದು ತುಸು ತ್ರಾಸದಾಯಕ. ಇನ್ನೂ ಕೆಲವರು ಎರಡು ರಾತ್ರಿ ಗಿರಿಗದ್ದೆಯಲ್ಲಿ ತಂಗಿದ್ದು ಚಾರಣವನ್ನು ಪೂರ್ಣಗೊಳಿಸುತ್ತಾರೆ. ಈ ಮಾರ್ಗದ ಒಟ್ಟು ದೂರ ಅರಣ್ಯ ಇಲಾಖೆ ನಕ್ಷೆ ಅನುಸಾರ, ಒಮ್ಮುಖ ದೂರ ಹನ್ನೆರಡು ಕಿ.ಮೀ. ಆದರೆ ಈ ಅಂತರವನ್ನು ಸಮಯದ ಮೂಲಕ ಮಾಪನ ಮಾಡುವುದು ಸರಿಯಾದುದು ಮತ್ತು ಕ್ರಮಿಸುವ ದಾರಿಯ ಸಮಯ ವೈಯಕ್ತಿಕವಾಗಿ ಅವರ ಸಾಮರ್ಥ್ಯದ ಮೇಲೆ ಅವಲಂಬಿಸಿದೆ.

ಮಾರ್ಗ 2: ಸೋಮವಾರಪೇಟೆಯ ಭಾಗದಿಂದಲೂ ಕುಮಾರ ಪರ್ವತದ ಚಾರಣ ಮಾಡಬಹುದಾಗಿದೆ. ಸೋಮವಾರಪೇಟೆಯಿಂದ 27 ಕಿ.ಮೀ. ದೂರದ ಶಾಂತ ಮಲ್ಲಿಕಾರ್ಜುನ ದೇವಸ್ಥಾನದಿಂದ ಚಾರಣ ಆರಂಭಿಸಿದರೆ 8 ಕಿ.ಮೀ. ನಡಿಗೆಯ ದಾರಿ ಇದೆ. ಈ ಮಾರ್ಗವನ್ನು ಒಂದು ದಿನದಲ್ಲಿ ಪೂರ್ಣಗೊಳಿಸಬಹುದು.



ಏರಿದಂತೆಲ್ಲ ಸಗ್ಗ ಸಮೀಪ...